(ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿರುವ ಪ್ರಥಮ ದರ್ಜೆ ಕಾಲೇಜು ಕಟ್ಟಡ ರಚಿಸಲು ತಯಾರಾದ ಅಂದಾಜು ಪಟ್ಟಿಯ ಮೊತ್ತವೆಷ್ಟು?

(ಆ) ಈಗ ರಚಿತವಾಗುತ್ತಿರುವ ಕಟ್ಟಡಕ್ಕೆ ಎಷ್ಟು ಹಣ ಪಾವತಿಯಾಗಿದೆ?

(ಇ) ಕಟ್ಟಡ ಯಾವಾಗ ಪೂರ್ತಿಯಾಗುವುದು?

(ಈ) ಕಟ್ಟಡ ಪೂರ್ಣಗೊಳಿಸಲು ಬೇಕಾದ ಅನುದಾನ ಈ ವರ್ಷ ಬಿಡುಗಡೆ ಗೊಳಿಸಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–

(ಅ) ರೂ. 13.10 ಲಕ್ಷಗಳು

(ಆ) ರೂ. 6.86 ಲಕ್ಷಗಳು

(ಇ) 1990–91ನೇ ಸಾಲಿನಲ್ಲಿ ಆರ್ಥಿಕ ಕೊರತೆಯಿಂದಾಗಿ ಆಯವ್ಯಯ ಒದಗಿಸಿಲ್ಲ. 1991–92ರಲ್ಲಿ ಆಯವ್ಯಯ ಒದಗಿಸಿ ಕಟ್ಟಡ ಪೂರ್ತಿಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

(ಈ) ಆರ್ಥಿಕ ಕೊರತೆಯಿಂದಾಗಿ 1990–91ರಲ್ಲಿ ಹಣವನ್ನು ಒದಗಿಸಿಲ್ಲ.

ಇತ್ತೀಚೆಗೆ ರಾಜ್ಯ ಸರ್ಕಾರಿ ನೌಕರರಿಗೆ ಕೊಟ್ಟ ಗುರುತಿನ ಚೀಟಿಯಿಂದ ಸರ್ಕಾರಕ್ಕೆ ತಗಲಿರುವ ವೆಚ್ಚದ ಬಗ್ಗೆ

414. ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಸಚಿವಾಲಯದ ನೌಕರರಿಗೆ ಗುರುತಿನ ಚೀಟಿಯನ್ನು ನೀಡಲಾಗಿದೆಯೇ?

ಆ) ಈ ಉದ್ದೇಶಿತ ಯೋಜನೆಗೆ ತಗಲಿದ ವೆಚ್ಚ ಎಷ್ಟು? ಮತ್ತು ಯಾವ ಉದ್ದೇಶಕ್ಕೆ ನೀಡಲಾಗಿದೆ?

ಇ) ವಿಶೇಷವಾಗಿ ಮಹಿಳಾ ನೌಕರರಿಗೆ ಈ ಗುರುತಿನ ಚೀಟಿ ಹಚ್ಚಿಕೊಳ್ಳಲು ಕೆರಿಕೆರಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):–

ಅ) ಹೌದು.

ಆ) ಸಚಿವಾಲಯ ಮತ್ತು ಇಲಾಖೆಗಳ ಎಲ್ಲಾ ಸರ್ಕಾರಿ ನೌಕರರನ್ನು ಒಳಗೊಂಡಂತೆ ಸರ್ಕಾರಿ ಮುದ್ರಣಾಲಯಕ್ಕೆ ರೂ. 2,47,200–00 ಗಳ ಯೋಜನೆಯನ್ನು ಮಂಜೂರು ಮಾಡಲಾಗಿದೆ. ವಿಧಾನ ಸೌದಕ್ಕೆ ಅನಧಿಕೃತ ಪ್ರವೇಶ ತಡೆಗಟ್ಟುವ ಮತ್ತು ಭದ್ರತಾ ವ್ಯವಸ್ಥೆ ಹಾಗೂ ಶಿಸ್ತಿನ ದೃಷ್ಟಿಯಿಂದ ಈ ವ್ಯವಸ್ಥೆಯನ್ನು ಮಾಡಲಾಗಿದೆ.

ಇ) ಇಲ್ಲ.

ರಾಜ್ಯದಲ್ಲಿ ರೋಗಗ್ರಸ್ಥ ಉದ್ಯಮಗಳ ಪುನರ್ ಜೀವನ ಘಟಕ ಸ್ಥಾಪಿಸುವ ಬಗ್ಗೆ

412. ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ರೋಗಗ್ರಸ್ತ ಉದ್ಯಮಗಳ ಪುನರುಜ್ಜೀವನ ಘಟಕ (ಸಿಕ್ ಯುನಿಟ್ಸ್ ಮಾನಿಟರಿಂಗ್ ಸೆಲ್) ವನ್ನು ಸ್ಥಾಪಿಸಿಲಾಗಿದೆಯೆ; ಹಾಗಿಲ್ಲದಿದ್ದಲ್ಲಿ ಯಾವಾಗ ಸ್ಥಾಪಿಸಲಾಗುವುದು ಹಾಗೂ ಯಾವ ಉದ್ದೇಶಕ್ಕಾಗಿ ಸ್ಥಾಪಿಸಲಾಗಿದೆ.

ಆ) ಈ ಘಟಕ ತಾತ್ಕಾಲಿಕ ಉದ್ದೇಶಕ್ಕೊ ಅಥವಾ ಖಾಯಂ ಉದ್ದೇಶಕ್ಕೆ ಸ್ಥಾಪಿಸಲಾಗಿದೆ, ತಾತ್ಕಾಲಿಕವಾಗಿ ಆದರೆ ಈ ಘಟಕದ ಅವಧಿ ಎಷ್ಟರವರೆಗೆ.

ಇ) ಈ ಉದ್ದೇಶಿತ ಘಟಕ ಈ ಅವಧಿಯಲ್ಲಿ ರೋಗಗ್ರಸ್ತ ಉದ್ಯಮಗಳ ಪುನರುಜ್ಜೀವನಕ್ಕೆ ಸಂಬಂಧಿಸಿದಂತೆ ವರದಿ ನೀಡಿದೆಯೆ; ಅಥವಾ ರೋಗಗ್ರಸ್ತ ಉದ್ಯಮಗಳ ಪುನರುಜ್ಜೀವನಕ್ಕೆ ತೆಗೆದುಕೊಂಡು ಕ್ರಮಗಳೇನು?